# ಹಾಸ್ಯ ಚಟಾಕಿಗಳು ಸೇರುತ್ತಲೇ ಇವೆ



**ಸರಿಗಮ ವಿಜಿ**

ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ತೀರ್ಪುಗಾರ

★ *ನಿಮ್ಮ ಹೆಸರಿನ ಹಿನ್ನೆಲೆ ಏನು?*

ತುಂಬಾ ವರ್ಷಗಳ ಹಿಂದೆ 'ಸಂಸಾರದಲ್ಲಿ ಸರಿಗಮ' ನಾಟಕ ನಿರ್ದೇಶಿಸಿ, ನಟಿಸಿದ್ದೆ. ಅದು ಈವರೆಗೆ 1397 ಪ್ರದರ್ಶನಗಳನ್ನು ಕಂಡಿದೆ. ರಾಜ್ಯದ ಮೂಲೆ ಮೂಲೆ ಸುತ್ತಿದೆ. ದೇಶದ ಬಹುತೇಕ ಮಹಾನಗರಗಳಲ್ಲಿಯೂ ಪ್ರದರ್ಶನ ಕಂಡಿದೆ. ಅಮೆರಿಕದಲ್ಲಿಯೂ ಹಲವಾರು ಆಟಗಳನ್ನು ಆಡಿದ್ದೇವೆ. ಇದನ್ನು ರಾಜಕುಮಾರ್ ಅವರಂತಹ ಮೇರು ನಟರೂ ಮೆಚ್ಚಿದ್ದರು. ನಾಟಕದ ಜನಪ್ರಿಯತೆಯ ಹಿನ್ನೆಲೆಯಲ್ಲಿ ನಾಟಕದ ಉತ್ತರಾರ್ಧ ನನ್ನ ಹೆಸರಿಗೆ ಶಾಶ್ವತವಾಗಿ ಅಂಟಿಕೊಂಡಿದೆ. ಯುಗಾದಿ ಹಬ್ಬದ ದಿನ ಈ ನಾಟಕವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 23 ವರ್ಷಗಳಿಂದ ತಪ್ಪದೆ ಆಡುತ್ತೇವೆ. ನಾಟಕ ನೋಡಲು ಬಂದ ಹೆಣ್ಣುಮಕ್ಕಳಿಗೆ ಮಡಿಲು ತುಂಬಿ ಗೌರವಿಸುತ್ತೇವೆ. ಕಳೆದ ವರ್ಷ ಮಾಜಿ ಸಚಿವೆ ಉಮಾಶ್ರೀ ಅಭಿನಯಿಸಿದ್ದರು.

★ *ಕಾಮಿಡಿ ಕಿಲಾಡಿಗಳಲ್ಲಿ ನಿಮ್ಮ ಪಾತ್ರ ಏನು?*

ತೀರ್ಪುಗಾರರಲ್ಲಿ ನಾನೂ ಒಬ್ಬ. ಮಕ್ಕಳ ನಾಟಕವನ್ನು ನೋಡಿ ರಸಸ್ವಾದ ಮಾಡುವ ಜೊತೆಗೆ ಅದರ ಮೌಲ್ಯಮಾಪನವನ್ನೂ ಮಾಡಬೇಕು. ಅಂಕವನ್ನು ನೀಡುವ ಜೊತೆಗೆ ಮಕ್ಕಳ ನಟನೆ ಕುರಿತಂತೆ ಪ್ರಶಂಸೆ, ತಿದ್ದಿಕೊಳ್ಳಬೇಕಾದ ಸಂಗತಿಯನ್ನು ಹೇಳಿಕೊಡುತ್ತೇನೆ.

★ *ಒಟ್ಟಾರೆ ಕಾರ್ಯಕ್ರಮದ ಬಗ್ಗೆ ನಿಮ್ಮ ಅನಿಸಿಕೆ?*

ತುಂಬಾ ಸುಲಭವಾಗಿ ಹಾಸ್ಯ ಕಿರುತೆರೆಯ ಮೂಲಕ ಜನರನ್ನು ತಲುಪುತ್ತಿದೆ. ಎಲ್ಲಾ ಕಾಲದಲ್ಲಿಯೂ ಹಾಸ್ಯ ಬದುಕಿನಲ್ಲಿ ಹಾಸುಹೊಕ್ಕಾಗಿರಬೇಕು. ಇಲ್ಲಿನ ಎಲ್ಲಾ ನಾಟಕಗಳು ರಂಗದ ಮೇಲೆ ಆಡಿದಂತೆ ಆಡಲಾಗುತ್ತದೆ. ಅದನ್ನು ಕ್ಯಾಮೆರಾಗಳು ಸೆರೆಹಿಡಿಯುತ್ತಿರುತ್ತವೆ. ಎಲ್ಲಿಯೂ ವಿರಾಮ ಇರುವುದಿಲ್ಲ. ಅದನ್ನು ಚಿತ್ರೀಕರಿಸಿದ ನಂತರ ಅನಗತ್ಯವನ್ನು ಕತ್ತರಿಸಿ, ಸಮಯಕ್ಕೆ ತಕ್ಕಂತೆ ಎಡಿಟ್ ಮಾಡಲಾಗುತ್ತದೆ.

★ *'ಸಂಸಾರದಲ್ಲಿ ಸರಿಗಮ'ದಲ್ಲಿ ಹೊಸತನವನ್ನು ಹೇಗೆ ಕಾಪಾಡುತ್ತೀರಿ?*

ಪ್ರತಿಪ್ರದರ್ಶನದಲ್ಲಿಯೂ ಅದು ಹೊಸತನ ಪಡೆಯುತ್ತದೆ. ಯಾವುದಾದರೂ ಡೈಲಾಗ್‌ಗೆ ಜನ ನಗಲಿಲ್ಲ ಅಂದರೆ, ಆ ಡೈಲಾಗ್ ಮುಂದಿನ ಪ್ರದರ್ಶನದಲ್ಲಿ ಇರುವುದಿಲ್ಲ. ಸಾಂದರ್ಭಿಕ ಸೇರ್ಪಡೆಗಳು ಆಗುತ್ತಲೇ ಇರುತ್ತವೆ. ಉದಾರಣೆಗೆ: ಮ್ಯಾನೇಜರ್ ಮತ್ತು ನನ್ನ ಸಂಭಾಷಣೆ.

ಮ್ಯಾನೇಜರ್: ನಿರ್ಮಾಪಕ ಅಡ್ವಾನ್ಸ್ ನೀಡಿದರೆ ಕುಕ್ಕರ್ ತೆಗೆದುಕೊಂಡು ಹೋಗಬೇಕಿತ್ತು. ನನ್ನ ಹೆಂಡತಿ ಕುಕ್ಕರ್ ತರಬೇಕು ಎಂದು ತಿಂಗಳಿಂದ ಹೇಳುತ್ತಿದ್ದಾಳೆ.

ನಾನು: ನಿನ್ನ ಕುಕ್ಕರ್ ಕಥೆ ಇರಲಿ, ನನಗೆ ನಿಕ್ಕರ್ ತೆಗೆದುಕೊಳ್ಳುವುದಕ್ಕೂ ಕಾಸಿಗೆ ಗತಿ ಇಲ್ಲ.

ನೋಟು ಅಮಾನ್ಯೀಕರಣದ ಸಂದರ್ಭದಲ್ಲಿ ಅನೇಕ ಹಾಸ್ಯಪ್ರಸಂಗಗಳು ಸೇರಿವೆ. 2000ದ ನೋಟಿಗೆ ಚಿಲ್ಲರೆ ಸನ್ನಿವೇಶ. ಎಟಿಎಂ ಸರದಿಯಲ್ಲಿ ನಿಲ್ಲುವುದು.

■ ರಾಘವೇಂದ್ರ